Reg.No. M. 1550.
KODAGU' MERCARA, (Coorg).

ಕೊಡಗು

ಸಂಪಾದಕರು:-ಶ್ರೀ ಪಿ. ಐ. ಬೆಳ್ಯಪ್ಪ, ವಾರ್ಷಿಕ ಚಂದಾ: ರೂ: ೩-೮-೦.

ಸಂಪುಟ ೨೪ | ಕಾರೀಕು ೪—೮—೧೯೪೪ನೇ ಶುಕ್ರವಾರ. | ಸಂಚಿಕೆ ೯

ಭಾರತದ 'ಫ್ಯೂರರ್' ಬೋಸ್

ಲೇ:-ಆಲ್‌ಫ್ರೆಡ್ ಟೈರ್‌ನರ್.

—೦೦—

ಜಪಾನಿನಿಂದ ಸ್ಥಾಪಿತನಾದ ಸಿಂಗಾಪುರದಲ್ಲಿಯು 'ಸ್ವತಂತ್ರ ಇಂಡಿಯಾ' ಸರಕಾರದ ಮುಖ್ಯಸ್ಥರಾದ ಸುಬಾಶ ಚಂದ್ರಬೋಸರು ಈ ಯುದ್ಧವಲ್ಲಿ ವಿಶ್ವಾದ ಬಹುಮುಖ್ಯ ಅಕ್ಷರಾಷ್ಟ್ರಗಳ ವ್ಯಕ್ತಿಯಾಗಿದ್ದಾರೆ ಅಕ್ಷರಾಷ್ಟ್ರಗಳು ರೂಪಿಸಿದ ಕೈಗೊಂಬೆಗಳಲ್ಲಿ ಇವರು ಅ ವ್ಯಕ್ತಿಯರಾಗಿ ಎಲ್ಲರಿಗಿಂತಲೂ ಮಿಗಿ ಲಾದ ಪ್ರತಿಷ್ಠೆಯನ್ನು ಪಡೆದಿದ್ದಾರೆ. ಸುಂದರರಾದ, ಚುರುಕು ಬುದ್ಧಿಯುಳ್ಳ ರಾದ, ಪಾಶ್ಚಿಮಾತ್ಯ ವಿದ್ಯಾಪಾರಂಗತ ರಾದ, ಉಜ್ವಲ ಮಹಾತ್ವಾಕಾಂಕ್ಷಿಗ ಳಾದ ಇವರು ಹತ್ತು ವರ್ಷಗಳ ಕೆಳಗೆ ಕ್ರಾಂತಿಕಾರಕ ಸಮಾಜವಾದಿಗಳಾಗಿ ದ್ದರು. ಈಗ ಫೇಜಿ ತತ್ವವಲಂಬಿಗಳಾ ಗಿದ್ದಾರೆ. 1933 ರಲ್ಲಿ ಆವರು ನುಡಿ ದ ಮಾತುಗಳು ಇನ್ನೂ ನನ್ನ ಕಿವಿಗಳ ಲ್ಲಿ ಪ್ರತಿಧ್ವನಿಸುತ್ತಿವೆ. 'ಫೇಜಿತತ್ವ ವು ಅವಶ್ಯಕವಾಗಿ ಮಿಲಿಟರಿ ತತ್ವವಾ ಗಿಸಿ. ಇದು ಇನ್ನೊಂದು ಯುದ್ಧಕ್ಕೆ ಹೇತುವಾಗುವದಲ್ಲದೆ ಬ್ರಿಟಿಷರ ನೊ ಗದಿಂದ ಬಿಡುಗಡೆಗೊಳ್ಳಲು ಉತ್ತನು ವಾದ ಸಂದರ್ಭವನ್ನು ಹಿಂದೂದೇಶ ಕ್ಕೆ ಒದಗಿಸುವದು. ದೊಡ್ಡದಾದ ರಾ ಷ್ಟ್ರೀಯ ಮತ್ತು ಸಾಮಾಜಿಕ ಸಮಸ್ಯೆ ಗಳು ಕೇವಲ ಬಲಪ್ರಯೋಗದಿಂದಲೇ ಬಗೆಹರಿಯುವವೆಂಬುದು ನನ್ನ ಭಿಪ್ರಾ ಯ. ಯುದ್ಧದಲ್ಲಿ, ಕ್ರಾಂತಿಯಲ್ಲಿ ನನ ಗೆ ನಂಬಿಕೆಯಿದೆ. ನನಗೆ ಮಾನವ ತ್ಯಾಗದಲ್ಲಿ ಭರವಸೆಯಿದೆ. 10 ಅಥ ವ 20 ಮಿಲಿಯ ಜನರು ಸಾಯುವ ದು ಹಿಂದೂದೇಶವ ಬಿಡುಗಡೆಯಂ ಥಾ ಮಹಾಸಮಸ್ಯೆಗೆ ದೊಡ್ಡ ಬೆಲೆ ಯೆಂಗಲಾರದು' 1933 ರಲ್ಲಿ ಹೀಗೆ ನುಡಿದ ಬೋಸರು ಇಂದು ಜಪಾನ್ 'ಸ್ವತಂತ್ರ ಹಿಂದೀ' ಸೇನೆಯೊಡನೆ ಬ್ರಿ ಟನ್ ಮತ್ತು ಅಮೇರಿಕಗಳ ವಿರುದ್ಧ ಯುದ್ಧ ಹೂಡಿದ್ದಾರೆ. ಬ್ರಿಟಿಷರು ಸಿಂಗಾಪುರದಲ್ಲಿ ನಿರ್ಮಿಸಿದ ಉತ್ತಮ ರೇಡಿಯೋವ ಮೂಲಕ ತಾನು ಜ ರ್ಮನ್ ಪ್ರಧಾನ ಪ್ರಚಾರ ಮಂತ್ರಿ ಗೇಬಲ್ಸರಿಂದ ಕಲಿತ ಪ್ರಚಾರವನ್ನು ಮಾಡುತ್ತಿದ್ದಾರೆ.

ಬೋಸರು ಮುನ್ನಡೆಗೊಳಿಸುವ ಬರಹ ಗಾರರು, ಬಿಸಿರಕ್ತವನ್ನು "ಉಬ್ಬಿಸುವ ವಾಗ್ಮಿಗಳು. "ಅಸಾಧಾರಣ ಪ್ರಚಾ ರ ಶಕ್ತಿಯಿರುವವರು. ಮನ ಒಪ್ಪಿ ಸುವ ತರ್ಕಮಾಡಬಲ್ಲವರು. ಗಾಂ ಧೀಯವರ ದಸ್ತಗಿರಿ, ಉಪವಾಸಗಳ ನ್ನು ತಮ್ಮ ಪ್ರಯೋಜನಕ್ಕೆ ಬಹು ಚೆ ನ್ನಾಗಿ ಉಪಯೋಗಿಸಿಕೊಂಡರು. ಹಿಂದುಗಳಲ್ಲಿ ಉಚ್ಚಕುಲದವರಾದ ಬೋಸರನ್ನು ಅನೇಕರು. ಬ್ರಿಟಿಷರು ದಸ್ತಗಿರಿ ಮಾಡಿದ್ದಾರೆ. ಪ್ರತಿಸಾರಿ ಜೈಲಿನಿಂದ ಬರುವಾಗ ಆವರು ಉಜ್ವ ಲ ಕ್ರಾಂತಿಕಾರರಾಗಿ ಬಂದಿದ್ದಾರೆ. 11 ವರ್ಷಗಳ ಹಿಂದೆ ಆನಾರೋಗ್ಯದ ಕಾರಣ ಬಿಡುಗಡೆಯಾಗಿ ಯೂರೋ ಪಿಗೆ ಕಳುಹಿಸಲ್ಪಟ್ಟಾಗ ಆವರು ಸಹಾ ಯಕ್ಕಾಗಿ ರಷ್ಯಾದ ಕಡೆ ದೃಷ್ಟಿಯಿಟ್ಟಿ ದ್ದರು. ಮಾಸ್ಕೋದಲ್ಲಿ ತಮ್ಮ ಕ್ರಾಂ ತಿಕಾರಕ ಮುಖ್ಯ ಖಚೇರಿ ಇರಬೇಕೆಂ ದು ಆಶಿಸಿದ್ದರು. ಆದರೆ ಆಗ ಯೂ ರೋಪಿನಲ್ಲಿದ್ದ ಮಹಾಕ್ರಾಂತಿಕಾರಕ ಪ್ಯಕ್ಕೆ ವಿಠಲಭಾಯಿ ಪಠೇಲರ ಸಂಪ ರ್ಕ ಬೆಳೆದು ಆವರ ದೃಷ್ಟಿಯು ಮಾ ಸ್ಕೋದಿಂದ ರೋಮಿನ ಕಡೆಗೆ ತಿರು ಗಿತು. ಮುಸಲೋನಿಯ ಆಹ್ವಾನ ದಂತೆ ಆವರು ರೋಮಿಗೆ ಹೋಗಿ ಸ ಖ್ಯ ಬೆಳೆಸಿದರು. ನಂತರ ಈ ಸಖ್ಯ ವೇ ಆವರಿಗೆ ಬರ್ಲಿನಿನ ಮಾರ್ಗತೋರಿ ಸಿತು. 1933 ರಲ್ಲಿ ಹಿಟ್ಲರನ ಗುಂಪ ನ್ನು ಸೇರಲು ಬೋಸರು ಹಿಂಜರಿಯುತ್ತಿದ್ದರು. ಆದರೆ ಕೆಲವು ತಿಂಗಳುಗ ಳ ನಂತರ ಆವರನ್ನು ಬೋಸರು ಮೆ ಚ್ಚಿದರು. ವಿಠಲಭಾಯಿ ಪಠೇಲರು ಸಾಯುವ ಮುಂಚೆ ಆವರೂ ಮತ್ತು ಬೋಸರೂ ಗಾಂಧೀಜಿಯವರ ನೀತಿ ಯನ್ನು ಖಂಡಿಸಿ ಚರಿತ್ರಾರ್ಹವಾದ ಹೇಳಿಕೆಯೊಂದನ್ನು ಹೊರಡಿಸಿದರು. ಅದರ ಪ್ರತಿ ಈಗಲೂ ನನ್ನಲ್ಲಿದೆ. ಇ ದಾದ ನಂತರ ವಿಠಲಭಾಯಿ ಪಠೇಲ ರು ಮೃತಿಯನ್ನೈದಿದರು. ಬೋಸ ರು ಅವರ ಹೆಸರು, ವರ್ಚಸ್ಸುಗಳನ್ನು ಉಪಯೋಗಿಸಿಕೊಂಡು ವಿಖ್ಯಾತರಾ ದರು. 1934 ರಲ್ಲಿ ಆವರು ಜರ್ಮ ನಿಗೆ ಹೋಗಿ ಹಿಟ್ಲರ್, ರಿಬ್ಬನ್‌ಟ್ರಾ ಪ್, ಗೋರಿಂಗ್, ಹೆಸ್ ಮೊದಲಾದ ನಾಝಿಗಳ ಮುಂದಾಳುಗಳೊಡನೆ ಭೇಟಿ ನಡೆಸಿದರು. ಕ್ರಮೇಣ ಬೋಸರು ತಮ್ಮ ಸಮತ-ವಾದಿ ತತ್ವವನ್ನು ಬಿ ಟ್ಟು ನಾಝಿ ಮತವನ್ನು ಮೆಚ್ಚಿದರು. ಅವರು ಅಗಾಗ್ಯೆ ಜರ್ಮನಿಗೆ ಹೋಗ ತೊಡಗಿದರು. ಜರ್ಮನ್ ಸೇನೆಯ ಶಕ್ತಿಯನ್ನು ಹೊಗಳತೊಡಗಿದರು. ಇ ಟಿಲಿಯು ನಾಶವಾದಳದ ವಿಶಾಲತೆಯ ನ್ನು ಪ್ರಸಂಶಿಸಿದರು. ಬ್ರಿಟಿಷ್ ಸಾ ಮ್ರಾಜ್ಯಕ್ಕೆ ಮುಂದೆ ಬರಬಹುದಾದ ಅವನತಿಯ ಚಿಹ್ನೆಯನ್ನು ಸಾರತೊಡ ದರು. ಹಿಂದೂದೇಶದ ಸರ್ವಸಮ್ಮ ದವರನ್ನೂ ಮೆಚ್ಚಿಸುವ ಕೆಲಸ ಮಾಡ ಲು ತೊಡಗಿದರು. 1937 ರಲ್ಲಿ ಕಾಂ ಗ್ರೆಸ್ಸು ಅಧಿಕಾರ ಸ್ವೀಕರಿಸಿತು. ಕಾಂ ಗ್ರೆಸಿನ ಪ್ರೆಸಿಡೆಂಟರಾಗಿದ್ದ ಇವರು ತ ಮ್ಮ ಪ್ರಚಾರವನ್ನು ಯಶಸ್ವಿಯಾಗಿ ನ ಡೆಸಲು ಆಗ ಸಾಧ್ಯವಾಯಿತು. 1938 ರಲ್ಲಿ ಗಾಂಧಿಪಕ್ಷವನ್ನು ಸ್ಪರ್ಧಿ ಸಿ ಜುನಾಘಡೆಯಲ್ಲಿ ವಿಜಯಿಗಳಾದ ರು. 'ಮುನ್ನಡೆಯೆ ಪಕ್ಷ'ವೆಂಬ ಹಿಂ ದು ಪಂಗಡವನ್ನು ರಚಿಸಿ ಜರ್ಮನಿ ಯ 'ಸ್ಟಾರ್ಮ್‌ಟ್ರೂಪ್'ನಂತೆ ವ್ಯವ ಸ್ಥೆಗೊಳಿಸತೊಡಗಿದರು. ತನ್ನ ಶಿಷ್ಯ ಬೋಸರ ಈ ಕಾರ್ಯಕ್ರಮದಿಂದ ಹಿ ಟ್ಲರನಿಗೂ ಹೆಮ್ಮೆ ಎನಿಸಿರಬೇಕು. ಕ್ರ ಮೇಣ ಬೋಸರು ಬಹು ಧೈರ್ಯದಿಂ ದ ಸರಕಾರವನ್ನು ಕೆಣಕತೊಡಗಿದ ರು. ಬ್ರಿಟಿಷರ ಸಂಬಂಧವನ್ನು ಕ ತ್ತರಿಸಬೇಕೆಂದರು. ತಮ್ಮ ನೆಲೆಹೊ ರೆಯ ರಾಷ್ಟ್ರಗಳಲ್ಲೂ ಪ್ರಚಾರ ನಡೆದಿ ತ್ತು. ಬರ್ಮಾದ ಪೂಜೆ ಮುಖ್ಯ ಮಂ ತ್ರಿಯಾಗಿದ್ದ ಯು ಶಾರವರು ಬೋ ಸರ ಆಪ್ತಮಿತ್ರರಾಗಿದ್ದರು. ಇವರಿಗೆ ಶತ್ರುಗಳ ಜೊತೆಯಲ್ಲಿ ವ್ಯವಹಾರವಿದೆ ಯೆಂದು ಇವರನ್ನು ಬ್ರಿಟಿಷರು ದಸ್ತ ಗಿರಿಮಾಡಿದರು. ಬೋಸರು ತನ್ನಷ್ಟೆ ಪ್ರಚಾರವನ್ನು ಬರ್ಮಾದಷ್ಟೇ ಅಲ್ಲ; ಸಯಾಮ್, ಮಲಯಾ, ಸಿಂಗಾಪುರ, ಇಂಡೋಚೀನಾಗಳಲ್ಲೂ, ಜರ್ಮನರ ಮತ್ತು ಜಪಾನ್ ಗೂಢಾಚಾರರ ಸ ಹಾಯದಿಂದ ನಡೆಸಿದರು. 1939 ರಲ್ಲಿ ಅಂತರರಾಷ್ಟ್ರೀಯ ಪರಿಸ್ಥಿತಿ ಬಿಗ ಡಾಯಿಸಿದಾಗ ಕಾಂಗ್ರೆಸು ಯೋಗ್ಯ ಕ್ರಮ ಕೈಕೊಳ್ಳಬೇಕೆಂದು ಬೋಸರು ಸಾರಿದರು. ಪೂರ್ಣ ಸ್ವಾತಂತ್ರ್ಯದ ಘೋಷಣೆಯಾಗಬೇಕೆಂದರು. ತಪ್ಪಿ ದರೆ ಸಾರ್ವತ್ರಿಕ ದಂಗೆ ಏಳಬೇಕೆಂದ ರು. ಇಲ್ಲಿಯೇ ಗಾಂಧಿಯವರಿಗೂ ಬೋಸರಿಗೂ ವ್ಯತ್ಯಾಸಬಂದುದು. ಬೋಸರು ದಂಗೆ, ಯುದ್ಧವಾಗಬೇಕೆಂ ದರು. 'ಬ್ರಿಟಿಷರಿಗೆ ಬಂದೊದಗಿದ ಗಂಡಾಂತರದ ಸಮಯದಲ್ಲಿ ಅವರ ಉಪಯೋಗ ಹೊಂದಿ ನಮ್ಮ ಕಾರ್ಯ ಸಾಧಿಸುವ ನೀತಿಯನ್ನು ವಿರೋಧಿಸು

ವೆನು. ಹಿಂದೂದೇಶದ ಬಿಡ
ಗಡೆಗಾಗಿ ಜಪಾನರಿಗೆ ಸಹಾಯಮ
ಡುವ ಇಷ್ಟ ನನಗಿಲ್ಲ. "ಬ್ರಿಟಿಷರ್ಕ
ಗ್ಗೆ ನನಗೆ ದ್ವೇಶವಿಲ್ಲ. ಹಿಂದೀಯ
ರನ್ನು ಪ್ರೀತಿಸುವಂತೆಯೇ ಆವರನ್ನು
ನ ನು ಪ್ರೀತಿಸುತ್ತೇನೆ' ಏಂದುಗಾಂ
ಯವರಂದರು.

ಬೋಸರು ಕಾಂಗ್ರೆಸಿಗೆ ವಿರುದ್ಧ
ಪ್ರಚಾರಕ್ಕೆ ತೊಡಗಿದರು. ಬೋ
ರನ್ನು ಸರಕಾರವು ಬಂಧಿಸಿತು. ಜೈ
ಲಿನಲ್ಲಿ ಉಪವಾಸ ಕೈಕೊಂಡ ಕಾರ
ಅವರ ಬಿಡುಗಡೆಯಾಯಿತು. ನಂ
ರ ಅಶ್ಚರ್ಯಕರವಾಗಿ ಅವರು ಕಣ್ಮ
ಯಾದರು. ಡಾ. ಗೇಬಲರು ಬೋ
ರ ಅಗಮನವನ್ನು ವಿಸ್ತಾರವಾಗಿ ಪ್ರ
ಟಿಸಿದರು. ಹಿಟ್ಲರನು ಬೋಸರ
ಬಿರುದುಗಳನ್ನು ಹೊಟ್ಟು ಗೌರವಿ
ದನು.

ಬೋಸರು ಟೋಕಿಯೋಕ್ಕೆ ಜ
ದು ಟೋಜೋರವರ ಸಂಗಡ ಒಪ್ಪ
ದನನ್ನು ಮಾಡಿಕೊಂಡರು. 194
ರಲ್ಲಿ ಜಪಾನ್ ಸಬ್‌ಮೆರೀನೊಂ
ಆವರನ್ನು ಸಿಂಗಾಪುರಕ್ಕೆ ತಂದೀ
ಸುಬಾಶರು 'ಸ್ವತಂತ್ರಭಾರತ'ದ ಗ
ಜನನ್ನು ಹಿಡಿದರು. 'ಸ್ವತಂತ್ರಭಾ
ತ' ಸರಕಾರವನ್ನು ಸ್ಥಾಪಿಸಿ 'ಬಿಡ
ಡೆಯ ಸೈನ್ಯ' ಒಂದನ್ನು ಸೇರಿಸಿದ
ಆವರು ಸಯಾಮ್, ಬರ್ಮಾ ಇ
ಖ್ಯ ಮಂತ್ರಿಗಳೊಡನೆ ಒಪ್ಪಂದವ
ಕೊಂಡು ಬ್ರಿಟಿಷರ ಮೇಲೆ ಯು
ಸಾರಿದರು. ಹಿಂದೂದೇಶದ ವೈಸ
ಯರಾಗಿ ವೇವೆಲ್ಲರು ಅಧಿಕಾರವ
ಡಾಗಲೇ ಸಿಂಗಾಪುರದಲ್ಲಿ ತಾವು
ದೀ ಸರಕಾರ ಸ್ಥಾಪಿಸಿರುವದ
ಬೋಸರು ಸಾರಿದರು 'ಡೆಲ್ಲಿಗೆ
ರವಾಗಿ ನುಗ್ಗುವೆವು' ಎಂದು ಹೇ
ದಾದರೂ ಅಂದೇ?

ಬೋಸರು ಮುಂದೆ ಬರಬಹು
ದ ಚಿಹ್ನೆಗಳನ್ನು ತಿಳಿಯಬೇಕು.
ಷ್ಟ್ರರಾಷ್ಟ್ರಗಳು ಮುರಿದು ಬೀಳುತ
ಗಿವೆ. ಜರ್ಮನಿಯ ಜೀವ ಉಳಿ
ಳ್ಳಲು ಹೆಣಗುತ್ತಿದೆ. ಜಪಾನಿನ
ಮ್ರಾಜ್ಯವು ಚಿಕ್ಕದಾಗತೊಡಗಿದೆ.
ತಹ ನೇಮಕ ಮಾಡಿಕೊಂಡ ಹಿ
ದೇಶದ ಹಿಟ್ಲರರಿಗೆ ಬೇರೆಮಾರ್ಗ
ಒಮ್ಮೆ ಜರ್ಮನ್ ವಿಮಾನನಲ್ಲಿ
ತ್ತೊಮ್ಮೆ ಜಪಾನ್ ಸಬ್‌ಮೆರೀನ
ಓಡಾಡಿದವರಿಗೆ ಬೇರೆ ಮಾರ್ಗ
ಈ ಪ್ರಯತ್ನಗಳಿಂದ ಯುದ್ಧವು
ಮುಂದರಿಯಬಹುದು, ಯುದ್
ಸಾಯುವವರ ಸಂಖ್ಯೆ ಹೆಚ್ಚಾಗ
ದು. ಬೋಸರು ಅಧಿಕಾರಕ್ಕಾಗಿ
ಪ್ರಯತ್ನ ಮಾಡುತ್ತಿದ್ದಾರೆ. ಹಿ
ದೇಶದ ಸಾರ್ವಭೌಮರ ಕಿ
ಮೇಲೆ ಅವರು ಕಣ್ಣಿಟ್ಟಿದ್ದಾರೆ.
ಹಾತ್ಮರ ಅವನತಿಯ ದೃಷ್ಟಿಯ
ದರಲ್ಲಿ ಇದೆ. ಅವರು ಮಾನ
ಗವಲ್ಲಿ ನಂಬಿಕ್ಕೆ ಇಟ್ಟಿದ್ದಾರೆ!

"ಮೊಂಬಿ ಕಾ

ಕೊಡಗು.

ತಾ. ೪-೮-೧೯೪೪ನೇ ಶುಕ್ರವಾರ

ಗಾಂಧಿ-ಜಿನ್ನಾ ಭೇಟಿ.

ಹಿಂದೂದೇಶದ ರಾಜಕೀಯ ಭವಿಷ್ಯವು ಕಾರ್ಗತ್ತಲೆಯಿಂದ ಕವಿದಿದೆ. ಈ ವಾತಾವರಣವನ್ನು ಪರಿಹರಿಸಿ ಶೋಭಾಯಮಾನವಾದ ಸೂರ್ಯೋದಯವು ಬೆಳಗುವಂತಾಗಿ ಭಾರತೀಯರು ನಗುಮುಖದಿಂದ ಜವಾಬ್ದಾರಿಯನ್ನು ವಹಿಸಿ ಯುದ್ಧದಲ್ಲಿ ಪಾಶವೀ ಶಕ್ತಿಯ ನಾಶಕ್ಕೆ ಕಂಕಣಬದ್ಧರಾಗಿ ತತ್ಪರಿಣಾಮವಾಗಿ ಜಗತ್ತಿನ ಚಿರಂತನವಾದ ಶಾಂತಿಗೆ ತಮ್ಮೊರಾಗಬೇಕೆಂಬ ಉದಾತ್ತ ಧ್ಯೇಯದಿಂದ ಮಹಾತ್ಮ ಗಾಂಧಿಯವರು ಬಿಕ್ಕಟ್ಟಿನ ಪರಿಹಾರಕ್ಕೆ ಕೆಲವು ಶರತ್ತುಗಳನ್ನು ಸರಕಾರದ ಮುಂದಿಟ್ಟಿರು. ಈ ಶರತ್ತುಗಳನ್ನು ಮುಂದಿಡಬೇಕಾದರೆ ಗಾಂಧಿಯವರು ಕೆಲ ಮಟ್ಟಿಗೆ ತಮ್ಮ ಪ್ರತಿಷ್ಠೆಯನ್ನು ಕುಗ್ಗಿಸಿಕೊಂಡಿರುವುದೆಂಬುದರಲ್ಲಿ ಸಂಶಯವಿಲ್ಲ. ಹಿಂದೂದೇಶಕ್ಕೆ ಬೇಕಾದ ಪೂರ್ಣ ಸ್ವಾತಂತ್ರ್ಯವೆಯುದ್ಧದನಂತರ ಮೊದಲು; ತತ್ಕಾಲಿಕವಾಗಿ ಇತರ ಎಲ್ಲಾ ಸಿವಿಲ್ ಅಧಿಕಾರಗಳು ಈಗ ಭಾರತೀಯರ ಅಧಿಕಾರಕ್ಕೆ ಬರಲಿ ಎಂಬ ಸೂಚನೆ ಮಾಡಿದ್ದರಲ್ಲಿ, ಪೂರ್ಣ ಭಾರತೀಯ ಬಿಕ್ಕಟ್ಟು ಪರಿಹಾರವಾಗಬೇಕು. ಭಾರತೀಯ ಹೃದಯದಲ್ಲಿ ಕವಿದಿರುವ ಕತ್ತಲೆಯು ತೊಲಗಿ ಚೈತನ್ಯದ ಪ್ರಭೆ ಬೆಳಗಬೇಕು; ಮುಸ್ಲಿಮರಿಗೂ ಇದರಿಂದ ಲಾಭವಾಗಬೇಕೆಂಬ ಉದಾರ ದೃಷ್ಟಿ ಒಡೆದು ಕಾಣುತ್ತದೆ. ಇಂಥಾ ಸ್ನೇಹ ಹಸ್ತವನ್ನು ಬ್ರಿಟಿಷ್ ಸಾಮ್ರಾಜ್ಯ ಶಾಹಿಯು ಪರ್ಯಾಲೋಚಿಸಲು ಮಹತ್ವವುಳ್ಳವುಗಳಲ್ಲವೆಂಬಂತೆ ನಿರಾಕರಿಸಿದುದು ಹಿಂದೂ ದೇಶೀಯರ ಮನಸಿನಲ್ಲಿದ್ದ ಬ್ರಿಟಿಷ್ ದ್ವೇಷವನ್ನು ಇನ್ನೂ ಹೆಚ್ಚಿಸಿದೆ. ಯುದ್ಧವು ತನಗೆ ಪರವಾಗಿ ನಡೆಯುತ್ತಿರುವಂತೆ ಬ್ರಿಟಿಷರ ಮನೋವೃತ್ತಿ ಕಠಿಣವಾಗುತ್ತಿರುವುದು ಕಂಡು ಬರುತ್ತಿದೆ. ಇಲ್ಲದಿದ್ದರೆ ಕ್ರಿಪ್ಸರನ್ನು ಸಂಧಾನಕ್ಕಾಗಿ ಕಳುಹಿಸಿದವರು ಇಂದು ಮಹಾತ್ಮರ ಸೂಚನೆಗಳನ್ನು ಈ ರೀತಿ ತಿರಸ್ಕರಿಸುವುದರಲ್ಲಿ ಅರ್ಥವಿಲ್ಲ. ಬ್ರಿಟಿಷರ ಈ ಧೋರಣೆಯಿಂದ ಕಾಂಗ್ರೆಸಿನವರಿಗೇ ಅಲ್ಲ, ಇಡೀ ಭಾರತೀಯರಿಗೆ ಸಹಿಸಲಾರದ ವೇದನೆಯುಂಟಾಗಿದೆ

ಬಿಕ್ಕಟ್ಟನ್ನು ಪರಿಹರಿಸಲು ಗಾಂಧೀಜಿಯವರು ಮಾಡಿದ ಎರಡು ಮಾರ್ಗಗಳಲ್ಲಿ ಬ್ರಿಟಿಷರ ಬಗ್ಗೆಯ ಈ ಶರತ್ತುಗಳು ನಿಷ್ಪ್ರಯೋಜನವಾದವು. ಮತ್ತೆ ಶ್ರೀ ರಾಜಗೋಪಾಲಾಚಾರಿಯವರ ಮೂಲಕ ಹಿಂದೂ ಮುಸ್ಲಿಂ ಐಕ್ಯತೆಗೆ ಮಾಡಿದ ಸೂಚನೆಗಳ ಬಗ್ಗೆ ಜಿನ್ನಾರವರಾದರೂ ಸಾಧಾರಣವಾಗಿ ಬ್ರಿಟಿಷ್ ಮುತ್ಸದ್ದಿಗಳಂತೆಯೇ ನಿರಾಶಜನಕ ಅಭಿಪ್ರಾಯ ವ್ಯಕ್ತಪಡಿಸಿದ್ದರೂ ಆದರಲ್ಲಿ ಆತಾಶೀರಣವೊಂದು ಕಂಡುಬರುತ್ತಿದೆ. ಜಿನ್ನಾರವರು ಮಹಾತ್ಮರನ್ನು ಬೊಂಬಾಯಿಯ ತನ್ನ ಮನೆಗೆ ಭೇಟಿಗೆ ಕರೆದಿರುವರು. ಗಾಂಧೀಜಿದುವರೂ ಒಪ್ಪಿರುವರು. ಭೇಟಿಯು ಕಾರ್ಯರೂಪಕ್ಕೆ ಇನ್ನೂ ನಿಶ್ಚಯವಾಗದಿದ್ದರೂ ಇದೇ ತಿಂಗಳಲ್ಲಿ ನಡೆಯಬಹುದು. ಈ ಭೇಟಿಯು ವಿಚಾರಪೂರ್ಣ ಬ್ರಿಟಿಷ್ ಮುತ್ಸದ್ದಿಗಳಲ್ಲಿ ಒಂದು ಬಗೆಯ ಹೆದರಿಕೆಯನ್ನು ಹುಟ್ಟಿಸಿದೆ. ನಿಜ, ಹೆದರಲು ಕಾರಣವೂ ಇದೆ. ಹಿಂದೂ ಮುಸ್ಲಿಮರು ಐಕ್ಯರಾದರೆ ಬ್ರಿಟಿಷರ ಬೇಳೆ ಬಹುಕಾಲ ಇಬ್ಬಿ ಬೇಯುವದಿಲ್ಲ. ಆದ್ದರಿಂದಲೇ ಅವರಿಗೆ ನಡುಕಹುಟ್ಟಿದೆ. ಬ್ರಿಟಿಷರಿಗೆ ಎಷ್ಟು ನಡುಕ ಹುಟ್ಟಿದೆಯೋ ಅಷ್ಟೇ ಈ ಭೇಟಿಯಿಂದ ಭಾರತೀಯರಿಗೆ ಹರ್ಷವುಟ್ಟಿದೆ. ಬ್ರಿಟಿಷರು ಗಾಂಧೀಯವರ ಸೂಚನೆಗಳನ್ನು ನಿರಾಕರಿಸಿದ ಕಾರಣ ಬ್ರಿಟಿಷರು ಹಿಂದೂದೇಶಕ್ಕೆ ನಿಜವಾಗಿಯೂ ಅಧಿಕಾರ ಕೊಡುವವರಲ್ಲವೆಂದೂ ಜಿನ್ನಾರವರಿಗೂ ಖಚಿತವಾಗಿರಬೇಕು. ಮಹಾತ್ಮಗಾಂಧಿಯವರು ಜಿನ್ನಾರ ಭೇಟಿಯೂಂಪ ಮೊದಲು ಸರ್ ತೇಜ್‌ಬಹದ್ದೂರ್ ಸಪ್ರು, ರಾಜಗೋಪಾಲಾಚಾರಿ ಮೊದಲಾದವರ ಅಭಿಪ್ರಾಯವನ್ನು ತೆಗೆದುಕೊಳ್ಳಲಿರುವರು. ಹೇಗೂ ಮೂರನೆ ಪಕ್ಷವೊಂದರಿಂದ ಶೋಷಿಸಲ್ಪಡುವದಕ್ಕಿಂತಾ ತಮ್ಮೆದುರಿನ ದೇಶೀಯು ಪಂಗಡಕ್ಕೇ ಬಾಗಿ ಐಕ್ಯರಾಗಿ ಸ್ನೇಹದಿಂದಿರುವದರಲ್ಲಿ ಶೋಭೆಯಿದೆ, ಘನತೆಯಿದೆ. ಹಿಂದೂ ದೇಶದ ಸ್ವಾತಂತ್ರ್ಯಕ್ಕಾಗಿ ತಮ್ಮ ಪಕ್ಷ ಪಂಗಡದ ಚಿಕ್ಕ ಭಾವನೆಯನ್ನು ಬಿಟ್ಟು ನರ್ತಿಸಬೇಕು. ಈ ರೀತಿಯ ಮನೋಭಾವವನ್ನು ದೇಶೀಯರೆಲ್ಲರೂ ತಳೆದರೆ ಗಾಂಧಿ-ಜಿನ್ನಾ ಭೇಟಿಯು ಸಫಲವಾಗುವದು. ಈ ಭೇಟಿಯು ಜಯಪ್ರದವಾಗಿ ಜಿನ್ನಾರವರೇ ತಮ್ಮ ಬಾಯಿಯಿಂದ ಕಾಂಗ್ರೆಸ್ ಮುಂದಾಳುಗಳನ್ನು ಬಿಡುವಂತೆ ಕೇಳುವಂತಾಗಲಿ, ಭಾರತ ನಭೋಮಂಡಲದಲ್ಲಿರುವ ಈ ತೊಡಕು ಬಗೆಹರಿದು ಸ್ವಾತಂತ್ರ್ಯ ಉದಯಭಾನುವಿನ ದಿವ್ಯ ಪ್ರಭೆಯು ಸಾರ್ವತ್ರಿಕ ಬೆಳಗಲಿ, ಸರ್ವರ ಹೃದಯವನ್ನೂ ಬೆಳಗಿಸಲಿ.

ಒಳದೇಶ.

ಕೊಟ್ಟೂರು ಶಾಲೆಯ ಬಳಿ ಸಹಕಾರಿ ಜಿನಸು ಸ್ಟೋರೊಂದು ತೆರೆಯಲ್ಪಟ್ಟಿದೆ.

ಕಳೆದ ಜೂನ್ ತಿಂಗಳಲ್ಲಿ ಕೊಡಗಿನಲ್ಲಿ 275 ಜನನಗಳೂ, 326 ಮರಣಗಳೂ ಸಂಭವಿಸಿರುವವಾಗಿ ಪ್ರಕಟವಾಗಿದೆ.

ಬೆಂಗಳೂರು ಕಂಟೋನ್ಮೆಂಟಿನ ಡಿಪ್ಯುಟ್ಯಿ ಸೆಷನ್ಸ್ ಜಡ್ಜರಾಗಿದ್ದ ಶ್ರೀ ಪಾಲೇಕಂಡ ಮೇದಪ್ಪನವರನ್ನು ತಾ. 1-8-44ರಿಂದ ಮೈಸೂರು ಹೈಕೋರ್ಟಿನ ಹಂಗಾಮಿ ಜಡ್ಜರಾಗಿ ನೇಮಿಸಲಾಗಿದೆ.

ಶ್ರೀ ಕುಟ್ಟಂಡ ತಮ್ಮಯ್ಯ ಬಿ. ಎ. ಬಿ. ಎಲ್. ರವನ್ನು ಕೊಡಗು ವಿದ್ಯಾಭಿವೃದ್ಧಿ ಫಂಡಿನ ಖಾಯಂ ಕಾರ್ಯದರ್ಶಿಗಳಾಗಿ ನೇಮಿಸಲಾಗಿದೆ.

ಕೊಡಗಿನಲ್ಲಿ ಸೈನಿಕರ್ಕೆ ಜನ ಸೇರಿಸಲು ಹೆಚ್ಚು ಶ್ರಮ ವಹಿಸಿದ ಪಾಗರೀ ಕರಿಗೆ ಯುದ್ಧ ಮುಗಿದಪರ್ಯಂತರ ಬಹುಮಾನವಾಗಿ ಕೊಡಬು ಜೋಫ್ ಕಮಿಶನರು 200 ಏಕ್ರೆ ಜಮೀನನ್ನು ರಿಜರ್ವ್ ಮಾಡಿ ಇಟ್ಟಿರುವರು.

ಮೂರ್ನಾಡು ರಾಮ ಮಂದಿರದ ಬಡಾವಣೆಗೆ ಶ್ರೀ ಬಿ. ಮಂಜಪ್ಪಳವರು ತಮ್ಮ ಮಗ ದಿವಂಗತ ಗೋಪಾಲಕೃಷ್ಣನ ಹೆಸರಿನಲ್ಲಿ ರೂ. 500 ಧನಸಹಾಯ ಮಾಡಲು ಒಪ್ಪಿರುವರು.

ತಿತಿಮತಿಯ ಅವರಣದ ಕಾಡುಗಳಲ್ಲಿ ಸಂಜರಿಸಿ ತೊಂದರೆ ಕೊಡುತ್ತಿರುವ 'ಹೊಸಕೇರಿ ರೋಗ' ಎಂಬ ಪುಂಡಾನೆಯನ್ನು ಗುಂಡು ಹೊಡೆಯಲು ಮುಳತ್ತು ರಕ್ಷಕಾರಿಗಳು ಕೊಡಲ್ಪಡುವದೆಂದು ಪ್ರಕಟವಾಗಿದೆ.

ಮದ್ರಾಸಿನ ರಾಮಕೃಷ್ಣಾಶ್ರಮದ ಆಟೋಮೋಬಾಯಿಲ್ ಇಂಜಿನೀಯರಿಂಗ್ ಶಾಲೆಯಲ್ಲಿ ಓದುತ್ತಿದ್ದ ಶ್ರೀ ನುದ್ರೆರ ಬಿ. ಬಿದ್ದಪ್ಪನವರು ಎಲ್. ಎ. ಇ ಪರೀಕ್ಷೆಯಲ್ಲಿ ತೇರ್ಗಡೆಯಾಗಿರುವರು.

ಕೊಡಗು ಎಕೌಂಟ್ಸ್ ಟೆಸ್ಟ್ ಪರೀಕ್ಷೆಯ ಪ್ರಥಮ ಭಾಗದಲ್ಲಿ ಶ್ರೀಗಳಾದ ಎಂ ಎನ್. ಗುಂಡುರಾವ್, ಜಿ ಡಿ. ಪರಮೇಶ್ವರ ಮತ್ತು ಎಚ್. ವಿ. ರಾಮಕೃಷ್ಣ ಇವರ್ಮು ಪ್ರಥಮ ಶ್ರೇಣಿಯಲ್ಲೂ, ಶ್ರೀ ಪಿ. ಎಸ್. ಈರಪ್ಪನವರು ದ್ವಿತೀಯ ಶ್ರೇಣಿಯಲ್ಲೂ ತೇರ್ಗಡೆಯಾಗಿರುವರು.

ಶ್ರೀ ಬಲ್ಲಚಂಡ ಅಪ್ಪಯ್ಯನವರ ಮತ್ತು ಶ್ರೀ ಶ್ರೀನಿವಾಸರರೊಳಗೆ ಸುಭೇದಾರರಾಗಿ ನೇಮಕ ಮಾಡುವದರಲ್ಲಿ ಬಂದ ತಕರಾರಿನಲ್ಲಿ ಶ್ರೀ ಅಪ್ಪಯ್ಯನವರೇ ಸೀನಿಯರೆಂದು ತೀರ್ಮಾನಿಸಿ ಅವರನ್ನು ಹಂಗಾಮಿ ಸುಭೇದಾರರಾ ದಕ್ಷಿಣ ಕೊಡಗಿಗೆ ನೇಮಿಸಲಾಗಿದೆ.

ಈ ವರ್ಷ ಜನವರಿ ಒಂದರಿಂದ ಜುಲೈ ಅಂತ್ಯದ ವರೆಗೆ ಮಡಿಕೇರಿಯ 59 ಇಂಚು 64 ಸೆಂಟು ಮಳೆಯಾಗಿದೆ. ಕಳೆದ ವರ್ಷ ಇದೇ ಅವಧಿಯಲ್ಲಿ 117 ಇಂಚು 29 ಸೆಂಟು ಆಗಿತ್ತು. ಕಳೆದ ವರ್ಷ ಜುಲೈ ತಿಂಗಳಲ್ಲಿ 80 ಇಂಚು 30 ಸೆಂಟು ಮಳೆಯಾಗಿತ್ತು. ಈ ವರ್ಷ ಬರೀ 39 ಇಂಚು 25 ಸೆಂಟು ಮಳೆಯಾಗಿದೆ.

ಕೊಡಗು ಪ್ಲಾಂಟೇಶನ್ ಫಂಡಿನ ಮಿಟಿಂಗ್ ನಡೆದು ಮೆಡಿಕಲ್ ಕೋರ್ಸಿಗೆ ಶ್ರೀ ಕೋದಂಡ ದೇವಯ್ಯನವರಿಗೂ, ಕಾಮರ್ಸ್ ಕೋರ್ಸಿಗೆ ಶ್ರೀ ಬಿದ್ದಂಡ ಎಂ. ಪೊನ್ನಪ್ಪನವರಿಗೂ, ಆರ್ಟ್ಸ್ ಕೋರ್ಸಿಗೆ ಶ್ರೀ ಕಡೇಮಾಡ ಕೆ. ಪೊನ್ನಪ್ಪನವರಿಗೂ, ಸೆಕೆಂದರಿ ಸ್ಕೂಲ್ ಸ್ಕಾಲರ್‌ಶಿಪ್ ಪೀರಾಜಪೇಟೆ ಶಾಲೆಯ ಶ್ರೀ ಕುಟ್ಟಂಡ ತಿಮ್ಮಯ್ಯನವರಿಗೂ ಹೊಸ ವಿದ್ಯಾರ್ಥಿವೇತನ ಕೊಡಲಾಯಿತು.

ಶ್ರೀ ಕಂಜಿತಂಡ ಕುಶಾಲಪ್ಪನವರಿಗೆ ಆಸೌಖ್ಯವಾದ ಕಾರಣ ಬ್ಯಾಂಕ್ ಕಾರ್ಯದರ್ಶಿಗಳಾದ ಶ್ರೀ ಕೊಂಗೆಟ್ಟಿರ ಅಪ್ಪಯ್ಯನವರು ಅಖಿಲಭಾರತ ಸಹಕಾರ ಪರಿಷತ್ತಿಗೆ ಜೋಗಿಡೆಯವರು.

ಅಖಿಲ ಭಾರತ ಪ್ಲಯುರೋಗ ನಿವಾರಣ ಸಂಸ್ಥೆಯ ಕಾರ್ಯದರ್ಶಿಗಳಾದ ರಾ. ಬ. ಡಿ. ದತ್ತಶರವರು ನಿನ್ನ ತ್ತರಾದ ಕಾರಣ ಅವರ ಜಾಗಲು ಜೆಲ್ಲೆಯಲ್ಲಿ ದುಲ್ಲಿ ಶ್ರೀ ಬೊಳಕರಂಡ ಎಂ. ಕಾರ್ಯಪ್ಪನವರನ್ನು ನೇಮಿಸಲಾಗಿದೆ.

—oo—

ಕಸ್ತೂರಿ ಬಾ ಸ್ಮಾರಕ ನಿಧಿ.

ಮಿಸಸ್ ಮಂಡೇಪಂಡ ಎಂ. ಅಪ್ಪಯ್ಯನವರು	ರೂ. 100
ಮಿಸಸ್ ಚೇಂದಂಡ ಯಂ. ಪೊನ್ನಪ್ಪನ	ರೂ. 100
ಮಿಸಸ್ ಮಂಡೇಪಂಡ ಸಿ. ಬಿದ್ದಯ್ಯ	ನವರು ರೂ. 50
ಶ್ರೀ. ಮುರುವಂಡ ಮಾಚಯ್ಯನವರು	,, 30
,, ಎ. ಎ. ರೋಡ್ರಿಗ್ಸ್‌ರವರು	,, 25
,, ಆಪ್ಪನೆರವಂಡ ಎಸ್. ಅಪ್ಪಚ್ಚುನವರು,	20
,, ಮರೋಪಂಡ ಯಂ. ಕಾರ್ಯಪ್ಪನವರು,	20
,, ಕೀತಿಯಂಡ ಮುದ್ದಪ್ಪನವರು	,, 20
,, ಕುಳ್ಳಂಗೋಡು ಪೂವಪ್ಪ ಜಮಾವಣಾಜ	ಯ್ಯನವರು ,, 10
,, ಪಟ್ಟಮಾಡ ಡಿ. ಮೇದಪ್ಪನವರು	,, 10
,, ಐಚೆಟ್ಟಿರ ಬೋಪಯ್ಯನವರು	,, 10
,, ಚೇಂದಂಡ ಬಿ. ಸುಬ್ಬಯ್ಯನವರು.	,, 10

5 ರೂ. ಕೊಟ್ಟವರು.

ಶ್ರೀಗಳಾದ ಕಂಡ್ರತಂಡ ಸೋಮಪ್ಪನವರು, ಅಜ್ಜಿಕುಟ್ಟಿರ ಕುಶಾಲಪ್ಪನವರು, ಪಾಲೇಕಂಡ ಗಣಪತ್ತಿಯವರು, ಕುಂಬೆರ ಅಪ್ಪಣ್ಣನವರು, ಕೊಡ್ಲೈಂಗಡ ಮೊಣ್ಣಪ್ಪನವರು, ಪುತ್ತೂ ಶ್ರೀಮತಿ ಬಲ್ಯಾಟಂಡ ಮುದ್ದಮ್ಮನವರು.

3. ರೂ. ಕೊಟ್ಟವರು.

ಶ್ರೀಗಳಾದ ಮೋಳೇರ ಗಣಪತ್ತಿಯವರು, ಚಿಟ್ಟನೂಡ ಕೃಷ್ಣಪ್ಪನವರು, ಶ್ರೀಮತಿಗಳಾದ ಚೆಂಬಾಂಡ ಸಿ. ಸೀತಮ್ಮನವರು ಮತ್ತು ಬಡ್ಡೋಂಡ ಸೋಮಮ್ಮನವರು.

2. ರೂ. ಕೊಟ್ಟವರು.

ಶ್ರೀಗಳಾದ ಚೀರಂಡ ಬೊಳ್ಳಯ್ಯನವರು, ಚೇಂದಂಡ ಎನ್. ಪೂವಪ್ಪನವರು.

1. ರೂ. ಕೊಟ್ಟವರು.

ಶ್ರೀಗಳಾದ ತಾತಂಡ ಮೂವಪ್ಪನವರು ಮತ್ತು ತೇಲಪಂಡ ತಿಮ್ಮಯ್ಯನವರು. ಈ ವರೆಗೆ ಒಟ್ಟು ರೂ. 5,880 ಸಿನಿಯೂಗಿದೆ.

WANTED.

An Estate writer with the knowledge of Accountancy and type writing on a salary of Rs. 50/- with dearness allowanee of Rs. 15/- per month. An increment of Rs. 5/- per year will be given on the merits of the work turned out. Free accomodation will be given.

For further particulars please apply to:-

P. Kunhi Kannan,
Perumbubetta Estate,
8-4 POLLETBT.

—oo—

FOR SALE.

A decent house with all facilitiss in Brahmin Valley is for sale.

For further particulars apply to:-

M. B. Nanjappa,
Mercara. 'Sita Villa'

ರೋಮೆಲ್ ಸತ್ತನೇ?

ಫ್ರಾನ್ಸ್ ಕದನಪಲ್ಲಿ ಈ ವಾರ ಮಿತ್ರರಿಗೆ ಹೆಚ್ಚಿನ ಲಾಭವಾದಂತೆ ಕಂಡುಬರದಿಲ್ಲ. ಬದಲು ಜರ್ಮನರ ಕೈ ಬಿಗಿಯಾದಂತೆ ಕಂಡುಬರುತ್ತಿದೆ. ಹಿಟ್ಲರನ ಕೊಲೆಯ ಯತ್ನದ ನಂತರ ಡಾ. ಗೇಬಲ್ಸರು ಯುದ್ಧದ ಸರ್ವಾಧಿಕಾರವನ್ನು ವಹಿಸಿಕೊಂಡು ಯುದ್ಧ ಜ್ವಾಲೆಯಲ್ಲಿ ತೊಡಗಿದ್ದಾರೆ. ಜರ್ಮನರು ಬಹು ವೀರಾವೇಶದಿಂದ ಹೋರಾಡುತ್ತಿದ್ದಾರೆ ಇದು ಜರ್ಮನರ ವಿಶಾಲ ಯುದ್ಧ ಕ್ರಮದ ಪೀಠಿಕೆಯೆಂದು ಗೇಬಲ್ಸರು ಹೇಳಿದ್ದಾರೆ. ಮಿತ್ರರು ಈ ರಂಗದಲ್ಲಿ ಹೋರಾಡುತ್ತಿರುವ ಪ್ರಮುಖ ದಳಪತಿ ರೋಮೆಲ್ಲನನ್ನು ಅತನ ಸುಮಾರು 70000 ಯೋಧರೊಡಗೂಡಿ ಸುತ್ತುಗಟ್ಟಿದ್ದರಂತೆ. ಇದರಿಂದ ಇಡೀ ಜರ್ಮನ್ ಸೇನೆ ನಾಶವಾಗುವದೆಂದು ಊಹಿಸಲಾಗಿತ್ತು. ಆದರೆ ರಣಧೀರ ರೋಮೆಲ್ಲನು ಮಿತ್ರವ್ಯೂಹವನ್ನು ಬೇಧಿಸಿ ತನ್ನ ಸೈನಿಕರೊಂದಿಗೆ ಸುರಕ್ಷಿತ ಸ್ಥಳಕ್ಕೆ ಪಾರಾಗಿರುವನು. ಈ ಪ್ರಯತ್ನದಲ್ಲಿ ರೋಮೆಲ್ಲನು ಹತನಾದನು; ಗಾಯಗೊಂಡು ಕಾರಿನಲ್ಲಿ ತಪ್ಪಿಸಿಕೊಂಡು ಓಡುವಾಗ ಕಾರು ಮಗುಚಿ ಬಿದ್ದು ಮರಣ ಹೊಂದಿದನು ಎಂದು ವರ್ತಮಾನ ಹಬ್ಬಿತ್ತು. ಸಾಯುವದರಲಿ, ಅತನಿಗೆ ಗಾಯಗಳು ಸಹ ಆಗಿಲ್ಲವೆಂದೂ ಜರ್ಮನ್ ವರದಿ ತಿಳಿಸುತ್ತಿದೆ. ಆತನೇ ಸೇನೆಯನ್ನು ನಡೆಸುತ್ತಿರುವದಾಗಿಯೂ ಹೇಳುತ್ತಿದ್ದಾರೆ. ತಾ. 31ರ ಯುದ್ಧದಲ್ಲಿ ಜರ್ಮನರು ಮಿತ್ರರಿಂದ ಟಿಸ್ಸೆ ಪಟ್ಟವನ್ನು ಪುನರಾಕ್ರಮಿಸಿರುವರು. ಅಮೇರಿಕಾದಳಗಳು ಗ್ರಾನ್‌ವಿಲ್ಲೆ ಮತ್ತು ಜಾರಾಂಚ್‌ಗಳನ್ನು ವಶಪಡಿಸಿ ಗೌಪುರೇ ಮತ್ತು ಟೊರಿನ್ನಿಗಳನ್ನು ಸುತ್ತುಗಟ್ಟಿರುವರಂತೆ. ಜರ್ಮನ್ ಸೇನೆಗಳು ಧೈರ್ಯದಿಂದ ಯುದ್ಧ ಮಾಡುತ್ತಿದ್ದರೂ ಅನ್ನದ ಅಭಾವವು ಅವರಿಗೆ ತೊಂದರೆಯಾಗಿ ಪರಿಣಮಿಸಿದೆಯೆಂದು ಮಿತ್ರಪಕ್ಷದ ವರದಿಗಳು ತಿಳಿಸುತ್ತವೆ. ಡಾ. ಗೇಬಲ್ಸರು ವಿಶಾಲರೀತಿಯ ಯುದ್ಧ ಕಾರ್ಯಕ್ರಮಕ್ಕೆ ಆಜ್ಞೆ ಕೊಡುತ್ತಾ 'ಈ ಯುದ್ಧದಲ್ಲಿ ನಾವೆಲ್ಲರು ವೆಪ್ಪ ಪ್ರತಿಯೋರ್ವನೂ ಈ ಸಂಧಿ ಸಮಯದಲ್ಲಿ ತನ್ನ ಶಕ್ತಿಯಿಂದ ರಾಷ್ಟ್ರಕ್ಕೆ ಸಹಾಯಮಾಡಬೇಕು. ಸಾರ್ವತ್ರಿಕ ಸೈನ್ಯ ಸಂಗ್ರಹಕ್ಕೆ ಆಜ್ಞೆ ಕೊಡಲಾಗಿದೆ. ನಮ್ಮ ಶತ್ರುಗಳ ನಾಶಕ್ಕಾಗಿ ಹೊಸ ಹೊಸ ಗುಪ್ತಾಸ್ತ್ರಗಳು ಸಿದ್ಧವಾಗುತ್ತಿವೆ. ಸ್ವತಹ ನಾನು ಆ ವ್ಯೂಹಗಳನ್ನು ನೋಡಿ ನಾನೇ ನಡುಗಿ ಹೋಗಿದ್ದೇನೆ. ಈ ಹೊಸ ಸಿದ್ಧತೆಗಳು ಶತ್ರುಗಳಿಗೆ ಬಿಡಿಸಲಾರದ ಒಗಟುಗಳಾಗುವವು. ಮಿತ್ರರು ಜರ್ಮನಿಯ ಮೇಲೆ ಮಾಡಿದ ಧಾಳಿಯಿಂದ ನಮ್ಮ ಕೈಗಾರಿಕೆಗಳಿಗೆ ವಿಶೇಷ ಹಾನಿಯಾಗಿಲ್ಲ. ಜರ್ಮನಿಯು ಯುದ್ಧ ಯತ್ನ ಹೇಗಿದೆಯೆಂಬುದು ಘಟಿಂದ ಮಿತ್ರರಿಗೆ ನಿಶ್ಚಯವಾಗುವದು' ಎಂದು ಹೇಳಿದರು. ಇದು ಎಷ್ಟರ ಮಟ್ಟಿಗೆ ನಿಜವೋ ಹೇಳಲು ಬಹುವದಿಲ್ಲ. ಆದರೆ ಬ್ರಿಟನಿನ ಮೇಲೆ ಪ್ರಯೋಗಿಸುತ್ತಿರುವ ಪ್ರೇತವಿಮಾನಗಳು ಈಗ ಹೆಚ್ಚಾಗಿ ಧಾಳಿಗೆ ಪ್ರಾರಂಭಿಸಿರುವದೂ, ಅವುಗಳನ್ನು ಉಪಯೋಗಿಸುವದರಲ್ಲಿ ಜರ್ಮನರು ಹೊಸ ರೀತಿಯನ್ನನುಸರಿಸುತ್ತಿರುವರೆಂದೂ ತಾ. 31ರ ಬರ್ಲಿನ್ ವಾರ್ತೆ ತಿಳಿಸುತ್ತದೆ. ಆ ಮೇರಿಕದ ಯುದ್ಧ ಇಲಾಖಾ ಕಾರ್ಯದರ್ಶಿ ಮಿ. ಹೆನ್ರಿಸ್ಟಿಮ್ಸ್‌ನ್‌ರವರು ಮೂರು ವಾರಗಳ ವರೆಗೆ ರಣಭೂಮಿಯ ಸಂಚರಿಸಿ, 'ಜರ್ಮನಿಯ ಸೈನ್ಯಗಳೂ, ಜನರೂ ನಮ್ಮ ಜಯದಿಂದ ಕೊಂಚ ಆಲುಗಿಸಲ್ಪಟ್ಟಿದ್ದಾರೆ. ಆದರೆ ಅವರೆಲ್ಲ ಇನ್ನೂ ಅಭೇದ್ಯವೇ ಇದ್ದಾರೆ. ಜರ್ಮನ್ ಸೈನ್ಯದ ಪತನದ ಯಾವ ಚಿಹ್ನೆಯೂ ಕಂಡುಬರುವದಿಲ್ಲ. ನಮ್ಮ ಶತ್ರುವು ಕ್ರೂರನಿದ್ದಾನೆ, ಬಲಿಷ್ಟನಿದ್ದಾನೆ. ಬೇಗನೆ ಜಯದೊರೆಯುವದೆಂದು ಭಾವಿಸಬೇಡಿ' ಎಂದು ಹೇಳಿದ್ದನ್ನು ನೋಡಿದರೆ ಜರ್ಮನರು ಇನ್ನೂ ಶಕ್ತಿವಂತರಿದ್ದಾರೆಂಬುದೂ, ಗೋಬೆಲ್ಸನ ಮಾತಿನಲ್ಲಿ ಸ್ವಲ್ಪವಾದರೂ ತತ್ವವಿರಬಹುದೆಂದೂ ಅನಿಸುತ್ತದೆ.

ಕಳೆದ ವಾರ ಬ್ರಿಟಿಷ್ ಸಾರ್ವಭೌಮರು ಇಟಲಿ ರಣರಂಗಕ್ಕೆ ಭೇಟಿ ಕೊಟ್ಟರು. ಇಟಲಿಯ ಯುದ್ಧ ಮಿತ್ರರಿಗೆ ಪರವಾಗಿ ನಡೆಯುತ್ತಿದೆ. ಜರ್ಮನರು ಬಹು ಮಟ್ಟಿಗೆ ಹಿಂದೆ ಸರಿದಿದ್ದಾರೆ. ಆದರೂ ಅವರು ನಿರುತ್ಸಾಹಿಗಳಾದಂತೆ ಕಂಡುಬರುವದಿಲ್ಲ. ಸಾರ್ವಭೌಮರು ಭೇಟಿಕೊಟ್ಟ ಸಂದರ್ಭದಲ್ಲಿ ಜರ್ಮನರು ಭಯಂಕರವಾದ ಒಳಸಂಚೊಂದನ್ನು ಮಾಡಿ ಸಾರ್ವಭೌಮರ ಮೇಲೆ ಬಾಂಬು ಪ್ರಯೋಗಿಸುವ ಯತ್ನಮಾಡಿದರು. ಸಾರ್ವಭೌಮರು ಸೈನಿಕರನ್ನು ಪರೀಕ್ಷಿಸಿ, ನಂತರ ಭೋಜನನಾಡುತ್ತಿರುವ ಕಾಲಕ್ಕೆ ಆ ಸ್ಥಳದ ಸುಮಾರು 300 ಗಜ ದೂರದಲ್ಲಿ ಬಾಂಬಿನ ಭಯಂಕರ ಸ್ಫೋಟನವಾಯಿತು. ಅದರ ಹತ್ತಿರವಿದ್ದವರು ಕೆಲವರು ಸತ್ತು ಕೆಲವರಿಗೆ ಜಖಂ ಆಯಿತು. ಆದರೆ ಸಾರ್ವಭೌಮರಿಗೂ, ಅವರ ಸಂಗಡ ಹೋಗಿದ್ದವರಿಗೂ ಏನೊಂದು ಅಪಾಯವಾಗಲಿಲ್ಲ ಅಂತೂ ಜರ್ಮನರು ಅಸಾಧ್ಯ ಗೆಂಡಾಂತರಕಾರಿಗಳು!

ರಷ್ಯಾ ರಣಾಂಗಣದಲ್ಲಿ ಜರ್ಮನರಿಗೆ ಅಪಜಯದ ಮೇಲೆ ಅಪಜಯಗಳಾಗುತ್ತಿವೆ. ಕೆಂಪು ಸೇನೆಯು ಪೋಲೆಂಡಿನ ಮುಖ್ಯ ಪಟ್ಟಣವಾದ ವಾರ್ಸಾದ ಹತ್ತಿರ ಬಂದಿದೆ. ರಷ್ಯಾದಲ್ಲಿ ಈಗ ಜರ್ಮನರ ಒಂದು ಪಿಳ್ಳೆಯು ಸಹ ಇಲ್ಲದಾಗಿದೆ. ರಷ್ಯನರು ಪೂರ್ವಪ್ರಶ್ಯಾದಿಂದ ಕೇವಲ 25 ಮೈಲುಗಳ ದೂರದಲ್ಲಿರುವರು. ರಷ್ಯಾದಳಪತಿ ಮಾರ್ಷಲ್ ಕೊನೀವ್‌ರವರು ಡ್ಯುಕೊಸ್ಲೊವಾಕಿಯೂದ ಕಡೆ ದೃಷ್ಟಿ ಇಟ್ಟಿದ್ದಾರೆ. ಈ ರಂಗದಲ್ಲಿ ಈಗ ನಡೆಯುತ್ತಿರುವಂತೆ ಯುದ್ಧ ನಡೆದರೆ ಮುಂದೆ ಜರ್ಮನಿಯನ್ನು ರಷ್ಯನರು ನುಗ್ಗುವದು ಖಂಡಿತ. ಆದರೆ ಹಿಟ್ಲರನು ರಷ್ಯಾದೊಡನೆ ಒಪ್ಪಂದ ಮಾಡಿಕೊಳ್ಳಲಿರುವನೆಂದು ಒಳಗೊಳಗೆ ವಾರ್ತೆಯಿದೆ. ಹೀಗೆ ಒಪ್ಪಂದವಾದರೆ ಮಿತ್ರರಿಗೆ ಅಪಾಯದ ದಿನಗಳು ಬಂದಂತೆ ಎನಬಹುದು.

ಅಸಾಮ್ ಗಡಿಯಲ್ಲಿ ಯಾವ ರೀತಿಯ ಚಟುವಟಿಕೆಯೂ ಕಂಡುಬರುವದಿಲ್ಲ. ಉತ್ತರ ಬರ್ಮಾದ ಜನರಲ್ ಸ್ಟಿಲ್‌ವೆಲ್ಲರ ಸೇನೆಗಳು ಮಿಟ್ಕಿಯೂನೆ ನಗರವನ್ನು ಆವರಿಸಿ ಹೋರಾಡುತ್ತಿದ್ದರೂ ನಗರದೊಳಗೆ ಪ್ರವೇಶಿಸುವದು ಈ ವರೆಗೆ ಸಾಧ್ಯವಾಗಿರುವದಿಲ್ಲ. ಜಪಾನರು ತಮ್ಮ 'ಪಿಲ್‌ಜಾಕ್ಸ್' ಮತ್ತು 'ಬಂಕರು'ಗಳ ಸಹಾಯದಿಂದ ಈ ನಗರದಲ್ಲಿ ಕಳವೂರಿ ನಿಂತಿದ್ದಾರೆ. ಈ ನಗರವು ಅಭೇದ್ಯವಾಗಿ ನಿಂತಿದೆ. ಜನರಲ್ ಸ್ಟಿಲ್‌ವೆಲ್ಲರಿಗೂ ಯೋಗ್ಯ ಸೈನ್ಯ ಸರಬರಾಯಿ ಆಗಿಲ್ಲವೆಂದು ತಿಳಿಯಬರುತ್ತದೆ.

ಸೋಮನ ಬೆಟ್ಟದ ಅನಾಹುತ.

ತಾ. 26ರಲ್ಲಿ ಮಳೆಯು ದೆಸೆಯಿಂದಾಗಿ ಕಡಿಯತ್ತುನಾಡಿನ ಚೇಲಾವರ ಗ್ರಾಮದಲ್ಲಿರುವ ಸೋಮನ ಬೆಟ್ಟವು ಜರಿದು ಬಿದ್ದು ಸುಮಾರು 25 ಏಕರೆ ಎತ್ತರಕ್ಕೆ ಕೋಟೆಯೂ, ಸುಮಾರು 600 ಬಟ್ಟ ಭೂಮಿಯೂ ಮುಚ್ಚಿ ಹೋಗಿದೆಯೆಂತೆ. ಮಧ್ಯರಾತ್ರಿ 2 ಗಂಟೆ ಸಮಯದಲ್ಲಿ ಬೆಟ್ಟದ ಒಂದು ಭಾಗ ಜರಿದು ಒಂದು ಹೊಳೆಯ ಬದಿಗಾಗಿ ಸುಮಾರು 2½ ಮೈಲು ದೂರ ಜಾರಿಕೊಂಡು ಬಂದಾಗ್ಯೆ ಉಂಟಾದ ಜೋರಾದ ಶಬ್ದದಿಂದ ಆ ಗ್ರಾಮದ ಜನರಿಗೆಲ್ಲಾ ಎಚ್ಚರವಾಯಿತು. ಅಲ್ಲಿಯ ಪಾಡಿ ಜಾರಮ್ಮನ ಐಯ್ಯಪ್ಪಮ್ಮನವರು ಈ ಶಬ್ದ ಕೇಳಿ ಮಲಗಿದಲ್ಲಿಂದ ಎದ್ದು ವಿಮಾನ ಹೋಗುವ ಶಬ್ದವೇನೋ ಎಂದು ನೋಡಲು ಹೊರಗೆ ಬರುವಷ್ಟರಲ್ಲಿ ಅವನ ಹೆಂಡತಿಯು, ಅಳುತ್ತಿದ್ದ 3 ತಿಂಗಳ ಮಗುವಿಗೆ ಹಾಲು ಕೊಡಲು ಅಡಿಗೆ ಮನೆಗೆ ಹೋದಳು. ಮಳೆ ಗಾಳಿಯ ರಭಸವು ಅವನನ್ನು ಹೊರಗಿನಿಂದ ಒಳಗೆ ತಳ್ಳಿತು. ಕೂಡಲೇ ಅವನ ಅಟ್ಟದ ಏಣಿಯು ಕೆಳಗೆ ಬಿತ್ತು. ಮಲಗಿದ ಐದಾರು ಪರ್ಚದ ಎರಡು ಮಕ್ಕಳು ಬೊಬ್ಬೆಹಾಕುತ್ತಾ ಎದ್ದು ಓಡಿ ಬಂದರು. ತಂದೆಯು ಅಪಾಯವನ್ನು ತಿಳಿದು ಎರಡು ದೊಡ್ಡ ಮಕ್ಕಳನ್ನು ಎರಡು ಕೈಯಲ್ಲಿ ಎತ್ತಿಕೊಂಡು ಮನೆಯ ಹಿಂಬಾಗಲಿಗಾಗಿ ಹೊರಗೆ ದುಮುಕಿ ಚಿಕ್ಕ ಅಂಗಳ ದಾಟಿ ಪಕ್ಕದ ಎತ್ತರವಾದ ಬರೆಯ ಮೇಲೆ ಹಾರಿದನು. ಹೆಂಡತಿಯೂ ಶಿಶುವನ್ನು ಎತ್ತಿಕೊಂಡು ಅವನನ್ನು ಹಿಂಬಾಲಿಸಿದಳು. ಆದರೆ ಬರೆ ಹತ್ತುವಾಗ್ಯೆ ಕೆಳಗೆ ಬಿದ್ದುಬಿಟ್ಟಳು. ಇದನ್ನು ನೋಡಿದ ಗಂಡನು ಮಕ್ಕಳಿಬ್ಬರನ್ನೂ ಬರೆಯ ಮೇಲೆ ಬಿಟ್ಟು ತಾನೂ ಛಕ್ಕನೆ ಕೆಳಗಿಳಿದು ಹೆಂಡತಿ ಮತ್ತು ಶಿಶುವನ್ನು ಬರೆಯ ಮೇಲೆ ಸಾಗಿಸಿದನು. ಅವರಿಬ್ಬರೂ ರಾತ್ರಿಯ ಉಡುಪಿನಲ್ಲಿ ಮಾತ್ರ ಇದ್ದರು. ಸುತ್ತಮುತ್ತಲೂ ಕಗ್ಗತ್ತಲೆ, ಮಳೆಗಾಳಿಯ ರಭಸ. ಅಷ್ಟರಲ್ಲಿ ಇವರ ಕೂಗನ್ನು ಕೇಳಿ ಸಮೀಪದ ನೆರೆಯವರು ದೀಪ ತಂದು ಅವರನ್ನು ರಕ್ಷಿಸಿದರು. ಮುಂಡಿಯೋಳಂಡ ಮನೆಯವರು ತುಂಬಾ ಸಹಾಯ ಮಾಡಿರುವರಂತೆ. ಈಗ ಐಯ್ಯಪ್ಪನವರ ಮನೆಯೇ ಕಾಣದಂತಾಗಿದೆ. ಸುಮಾರು ಒಂದು ಫರ್ಲಾಂಗು ದೂರದಲ್ಲಿ ಅವರ ಮನೆಯಲ್ಲಿದ್ದ ಪೊನ್ನಾಲ ದೇವರ ಭಂಡಾರದ ಬೆಳ್ಳಿಯ ಮೂಲುಗಳಿದ್ದ ಒಂದು ಚಿಪ್ಪು, ಅವರ ಒಂದು ಕೊಡಪಾನ, 2½ ಬಟ್ಟೆ ಬತ್ತ, ಮನೆಯ ಒಂದೆರಡು ಕಿಟಿಕಿ, ಬಾಗಿಲುಗಳೂ ದೊರೆತಿವೆ. ಸುಮಾರು 12 ನಡೆ ದನಕರುಗಳು ಮಣ್ಣಿನಲ್ಲಿ ಹೂತು ಹೋದಲ್ಲಿಂದ ನಾಲ್ಕೈದು ಎಳೆದು ರಕ್ಷಿಸಲ್ಪಟ್ಟವೆಂದೂ, ಜರಿದ ಬೆಟ್ಟದ ಮಣ್ಣು ಹಾಗೆ ಹರಿದು ಮರ ಕಲ್ಲುಗಳಿಂದ ಕೂಡಿ ನೋಡಲು ಗಟ್ಟಿ ನೆಲದಂತೆ ಕಂಡರೂ ಮೇಲೆ ನಡೆದರೆ ಹೂತು ಹೋಗುವಂತಿದೆಯೆಂದೂ, ಈ ಮಣ್ಣುನೀರು ಹೊಳೆಗೆ ಸೇರಿ ಮೀನುಗಳು ಸಹ ಸತ್ತಿವೆಯೆಂದೂ ತಿಳಿಯಬರುತ್ತದೆ. ಒಟ್ಟು ನಷ್ಟ ರೂ. 15 ಸಾವಿರವನ್ನು ಮೀರಬಹುದೆಂದು ಹೇಳಲಾಗುತ್ತಿದೆ. ಐಯ್ಯಪ್ಪಮ್ಮನವರ ಸರ್ವವೂ ಹೋಗಿ ಸುಮಾರು ರೂ. 3 ಸಾವಿರದಷ್ಟು ನಷ್ಟವಾಗಿರಬಹುದು. ನಿರ್ಗತಿಕರಾದ ಇವರಿಗೆ ಮಹನೀಯರು ಉದಾರ ಹಸ್ತದಿಂದ ಧನ ಸಹಾಯ ಕೊಟ್ಟು ಅವರನ್ನೂ, ಅವರ ಕುಟುಂಬವನ್ನೂ ಕಾಪಾಡುವರಾಗಿ ನಂಬುತ್ತೇವೆ.

ಹಿಂದೀ ರಾಜಕೀಯ.

ಕಾಮನ್ಸ್ ಸಭೆಯಲ್ಲಿ.

ಹಿಂದೂದೇಶದ ಪ್ರಶ್ನೆಯು ತಾ. 28 ರಲ್ಲಿ ಪಾರ್ಲಿಮೆಂಟಿನಲ್ಲಿ ಚರ್ಚಿಸಲ್ಪಟ್ಟಿತು. ಗಾಂಧೀಯವರ ಸೂಚನೆಗಳೂ ವಿಮರ್ಶಿಸಲ್ಪಟ್ಟವು. ಗಾಂಧೀಯವರ ಈ ಯೋಜನೆಯಿಂದ ಲಾರ್ಡ್ ವೇವೆಲ್ಲರೊಡನಾಗಲಿ, ಬಂಧಿತರಾದ ಕಾಂಗ್ರೆಸ್ ಮುಖಂಡರೊಡನಾಗಲೀ ಲಾಭಕರವಾಗಿ ಚರ್ಚಿಸಲು ಅನುಕೂಲವಾಗಿಲ್ಲ. ರಚನಾತ್ಮಕವಾದ ಸೂಚನೆಗಳನ್ನು ಮಾಡಿರೆಂಬ ವೇವೆಲ್ಲರ ಸೂಚನೆಗೂ ಸಹ ಇದು ಅರ್ಹವಾದ ಉತ್ತರವಾಗಿಲ್ಲವೆಂದು ಎಮರಿ ಸಾಹೇಬರು ಹೇಳಿದರು. ಹಿಂದೂದೇಶದ ಪರ ಮಾತಾಡುತ್ತಾ ಪೆಥಿಕ್ ಲಾರೆನ್ಸರು ಯುದ್ಧ ಮುಗಿದ ನಂತರ ಹಿಂದೂದೇಶಕ್ಕೆ ಸ್ವಪ್ರಭುತ್ವಾಧಿಕಾರ ವಿರಬೇಕೆಂಬುದನ್ನು ಈ ಸಭೆಯು ಪ್ರಪಂಚಕ್ಕೆ ಸಾರಬೇಕು. ಗಾಂಧೀಯವರ ಸೂಚನೆಗಳು ಉತ್ತಮವಾಗಿವೆ. ಅವರು ಸ್ನೇಹಹಸ್ತವನ್ನು ಮುಂದೆ ಮಾಡಿದ್ದಾರೆ. ಸಪ್ತಸಮುದ್ರಗಳಲ್ಲಿ ಶಾಂತಿಯನ್ನು ಕಾಪಾಡಲು ಬ್ರಿಟನು ಸಾಮರ್ಥ್ಯ ಪಡೆದಿದೆಯೇ ಎಂಬ ಅಂಶದಲ್ಲಿ ಸಂಶಯತಲೆದೋರುವ ಹಲವು ಘಟನೆಗಳು ನಡೆದಿವೆ. ಇಂಡಿಯಾದ ಸವಿೂಪದಲ್ಲಿ ಈ ಸಂಶಯ ಎಲ್ಲದಕ್ಕಿಂತಲೂ ಮಿಗಿಲಾಗಿ ತಲೆದೋರಿದೆ. ಇಂಡಿಯಾದ ಬೆಂಬಲವಿಲ್ಲದೆ ಪ್ರಪಂಚದ ಶಾಂತಿಯು ಸುಭದ್ರವಾಗಿ ನಿಲ್ಲುವದಿಲ್ಲವೆಂದು ನಾನು ಖಂಡಿತವಾಗಿ ಹೇಳುತ್ತೇನೆ. ಆದ್ದರಿಂದ ಹಿಂದೂದೇಶದ ಸಮಸ್ಯೆಯು ಬ್ರಿಟನ್ ಮತ್ತು ಇಂಡಿಯಾಕ್ಕೆ ಮಾತ್ರ ಸಂಬಂಧಿಸಿದುದಲ್ಲ. ಇಡೀ ಪ್ರಪಂಚಕ್ಕೆ ಅನ್ವಯಿಸಿದ್ದು ಎಂದು ಹೇಳಿದರು. ನಂತರ ಚರ್ಚೆಯಾಯಿತು. ಚರ್ಚೆಯ ಸಮಯದಲ್ಲಿ ಕೇವಲ 45 ಸದಸ್ಯರು ಮಾತ್ರ ಹಾಜರಿದ್ದರಂತೆ! ಚರ್ಚೆಯಲ್ಲಿ ಮಿ. ಸೋರೆನ್ಸನ್‌ರವರು 'ಗಾಂಧಿಯವರು ಬಾಗಿಲು ತೆರೆದಿದ್ದಾರೆ. ಅದನ್ನು ಮುಚ್ಚಿಸದಿರಿ' ಎಂದರು. ಸರ್ ಜಾರ್ಜ್ ಷೂಸ್ಟರ್‌ರವರು ಪಾಕಿಸ್ತಾನವನ್ನು ವಿರೋಧಿಸಿದರು. ಗಾಂಧಿಯವರ ಮನೋಭಾವ ಇನ್ನೂ ಉತ್ತಮಗೊಂಡ ಹೊರತು ಬಿಕ್ಕಟ್ಟಿನ ಪರಿಹಾರಕ್ಕೆ ಯೋಗ್ಯ ಪ್ರಯತ್ನ ಮಾಡಲಾಗದೆಂದು ಮಿ. ಪ್ರೈಸ್‌ರವರುಹೇಳಿದರು. ಭಾರತೀಯರಿಗೆ ಆಡಳಿತಾಧಿಕಾರವನ್ನೂ ರಕ್ಷಣಾಧಿಕಾರವನ್ನು ಬಿಡುವದೊಳ್ಳೆಯದು ಅದರಲ್ಲಿ ಭಾರತೀಯರು ಪರಾಜಯ ಹೊಂದಿದರೆ ತಪ್ಪು ನಮ್ಮದಾಗದು, ಎಂದು ಪ್ರೊ. ಹಿಲ್‌ರವರು ಹೇಳಿದರು. ಎಮರಿಯವರು ಉತ್ತರ ಕೊಡುತ್ತ 'ನಾವು ಕಷ್ಟದಲ್ಲಿದ್ದಾಗ ಹೀಗೆ ಕ್ರಿಪ್ಸ್ ಸಲಹೆಗಳಂತೆ ನಡೆಯಲು ಭರವಸೆಯಿತ್ತೆವೋ ಹಾಗೆಮ್ಮ ಅಭಿಪ್ರಾಯಗಳನ್ನು ವ್ಯಕ್ತ ಮಾಡಲು ಸಿದ್ಧರಿದ್ದೇವೆ. ಗಾಂಧಿಯವರು ಸೂಚಿಸಿರುವ ಯೋಜನೆಯು ಸಮರ್ಪಕವಾಗಿಲ್ಲ. 250 ವರ್ಷಗಳಿಂದ ಅಖಂಡವಾಗಿ ಬಂದಿರುವ ಹಿಂದೂ ದೇಶದ ಐಕ್ಯಮತ್ಯವನ್ನು ವಿನಾಶಗೊಳಿಸಿ ವಿಭಾಗಿಸುವದು ಸರಿಯಲ್ಲ. ಇಂಡಿಯಾದ ಐಕ್ಯಮತ್ಯವಾಗಬೇಕಾದರೆ ಎಲ್ಲ ಪಂಗಡಗಳಿಂದಲೂ ಅಂಗೀಕೃತವಾದ ರಾಜ್ಯಾಂಗರಚನೆಯು ಆಗತ್ಯ. ಅಲ್ಪ ಸಂಖ್ಯಾಕರ ಹಿತವನ್ನು ಮರೆತು ನಾವು ವರ್ತಿಸುವದು ಸಾಧ್ಯವಿಲ್ಲ' ಎಂದು ನಿಖಂತಾಗಿ ಹೇಳಿದರು. ಒಟ್ಟಾರೆ ಗಾಂಧೀಯವರ ಸೂಚನೆಗಳು ನಿರಾಕರಿಸಲ್ಪಟ್ಟವು.

ಲಾರ್ಡ್ ಸಭೆಯಲ್ಲಿ.

ಲಾರ್ಡ್ ಸಭೆಯಲ್ಲಿ ಇದೇ ರೀತಿಯಾಗಿ ಸೂಚನೆಗಳು ತಿರಸ್ಕೃತವಾದವು. ಈ ಚರ್ಚೆಯಲ್ಲಿ ಮಾತಾಡುತ್ತಾ, ಲಾರ್ಡ್ ಸ್ಯಾಬೋರ್ಲಿಯವರು 'ಕ್ರಿಪ್ಸ್ ಸಲಹೆಗಳು ಇನ್ನೂ ಆಚರಣಾಯೋಗ್ಯವಾಗಿವೆಯೆಂದು ಹೇಳಲಾಗಿದೆ. ನಾವು ಹಿಂದಿನದೆಲ್ಲವನ್ನು ತಿಳಿಸುತ್ತಾ ಹೋಗುವದಿಲ್ಲ. ಮುಂದಿನದನ್ನು ಮಾತ್ರ ಗಮನಿಸಬೇಕಾಗಿದೆ. ಜಪಾನಿನ ಹೆದರಿಕೆಯು ದೂರವಾಯಿತೆಂದೂ, ಎಲ್ಲ ಕಡೆಯಲ್ಲಿಯೂ ಯುದ್ಧವು ಸರಿಯಾಗಿ ನಡೆಯುತ್ತಿದೆಯೆಂದು ನಂಬುವದು ತಪ್ಪು' ಎಂದು ಹೇಳಿದರು. ಇಂಡಿಯಾದ ಅಂಡರ್ ಸೆಕ್ರೆಟರಿಗಳಾದ ಲಾರ್ಡ್ ಮಂಸ್ಟರವರು, 'ಕ್ರಿಪ್ಸ್ ರಾಯಭಾರದಲ್ಲಿ ಘೋಷಿಸಲ್ಪಟ್ಟ ರಾಜ್ಯಾಂಗ ಸುಧಾರಣೆಯು ಇನ್ನೂ ಜಾರಿಯಲ್ಲಿದೆ. ಅವು ಯೋಗ್ಯವಾಗಿವೆ. ಗಾಂಧಿ, ರಾಜಾಗೋಪಾಲಾಚಾರಿ ಇವರ ಸಲಹೆಗಳ ಬಗ್ಗೆ ಹಿಂದೂದೇಶದ ಅಭಿಪ್ರಾಯ ಭಿನ್ನಭಿನ್ನವಾಗಿದೆ. ಗಾಂಧಿಯವರ ಪಾದ ಸರಣಿ ಸ್ಪಷ್ಟವಾಗಿಲ್ಲ.' ಎಂದರು. ವೈಕೌಂಟ್ ಎಲಿಬ್ಯಾಂಕ್ ಎಂಬವರು ಮಾತಾಡುತ್ತಾ 'ಹಿಂದೂದೇಶದಲ್ಲಿ ಒಪ್ಪಂದಕ್ಕೆ ಅಡ್ಡಿಯಾಗಿರುವದು ಒಬ್ಬ ವ್ಯಕ್ತಿ. ಅವರು ದೊಡ್ಡ ವಂಚಕರು. ಅನೇಕ ಸಾರೆ ಅವರು ತಮ್ಮ ದೇಶೀಯರನ್ನು ವಂಚಿಸಿದ್ದಾರೆ. ಆಲ್ಲದೆ ಬ್ರಿಟನಿನ ಕೆಲವರನ್ನೂ ವಂಚಿಸಿರುವರು. ಅವರ ದೊಡ್ಡ ವಂಚನೆಯೆಂದರೆ ಸಾಯುವ ಸ್ಥಿತಿಯು ವರೆಗೆ ಉಪವಾಸಮಾಡಿ ಇದರ ಮೂಲಕ ಭಾರತೀಯರ ಸಹಾನುಭೂತಿ ಪಡೆದು ಅವರನ್ನು ಇನ್ನೂ ತೊಂದರೆಗೆ ಎಗುರಿಪಡಿಸುವರು. ಇಂಡಿಯಾದ ವಿಶಯವನ್ನೆಲ್ಲಾ ನಾವು ಎಮರಿಯವರ ಮತ್ತು ಲಾರ್ಡ್ ವೇವೆಲ್ಲರವರ ಕೈಯಲ್ಲಿ ಬಿಟ್ಟು ಸುಮ್ಮನಿರುವದು ಒಳ್ಳೆಯದು' ಎಂದು ಹೇಳಿದರು.

ಈ ಬಗ್ಗೆ ಗಾಂಧೀಜಿಯವರು ತಡುತ್ತಾ–'ಈ ಚರ್ಚೆಯು ನನಗೆ ನಿರಾಶೆಯನ್ನುಂಟುಮಾಡಿದೆ. ಇಂಡಿಯಾ ಸಮಸ್ಯೆಯು ಪರಿಹಾರವಾಗಲೆಂದು ನಾನು ಸಲಹೆಗಳನ್ನು ಮಾಡಿದೆನು. ಕಾಂಗ್ರೆಸ್ ವರ್ಕಿಂಗ್ ಕಮಿಟಿ ಮೆಂಬರುಗಳೊಡನೆ ಮಾತಾಡಲು ಅವಕಾಶ ಬೇಕೆಂದು ಕೇಳಿದೆನು. ಆದರೆ ಬ್ರಿಟಿಷರಿಗೆ ಇಂಡಿಯಾ ಸಮಸ್ಯೆಯನ್ನು ಪರಿಹರಿಸುವದು ಬೇಕಿಲ್ಲವೆಂದು ವ್ಯಕ್ತವಾಗುತ್ತದೆ' ಎಂದು ಹೇಳಿದರು.

ಜಿನ್ನಾರವರು.

ರಾಜಗೋಪಾಲಚಾರಿಯವರು ಗಾಂಧೀಜಿಯವರ ಒಪ್ಪಿಗೆಪಡೆದು ಹಿಂದೂ ಮುಸ್ಲಿಂ ಐಕ್ಯತೆಗೆ ಸೂಚಿಸಿದ ಯೋಜನೆಯ ಬಗ್ಗೆ ಮುಸ್ಲಿಂ ಲೀಗಿನ ಅಧ್ಯಕ್ಷರಾದ ಜಿನ್ನಾರವರು ತಮ್ಮಭಿಪ್ರಾಯವನ್ನು ವ್ಯಕ್ತಪಡಿಸುತ್ತಾ, ಈ ಸೂಚನೆಗಳು ನನ್ನನ್ನು ಸಾರ್ವಜನಿಕರ ಮುಂದೆ ನಗೆಗೀಡು ಮಾಡಲು ಒಡ್ಡಿದ ತಂತ್ರಗಳೆಂದಿರುವರು. ಈ ಸೂಚನೆಗಳಲ್ಲಿ ಹೊರುಳಿಲ್ಲವೆಂದೂ ಇವು ಕೇವಲ ಪಾಕಿಸ್ತಾನದ ಹೊಟ್ಟು ಆಗಿರುವದೆಂದೂ ಹೇಳಿದರು. ಪಾಕಿಸ್ತಾನವನ್ನು ವಿರೋಧಿಸುವ ವಿಚಾರಣೀಗಿನ ಶರಾವಿನಲ್ಲಿ ಎಲ್ಲೂ ಇಲ್ಲವೆಂದೂ ರಾಜಾಜಿಯವರು ಇದನ್ನು ಕಲ್ಪಿಸಿಕೊಂಡಿರುವರೆಂದೂ ಹೇಳಿದರು. ಹೀಗೆ ಹಿಂದೂ ದೇಶವನ್ನು ವಿಭಾಗಿಸುವ ತತ್ವಕ್ಕೆ ಮಹಾತ್ಮರು ಒಪ್ಪಿಗೆ ಇತ್ತ್ತುದನ್ನು ಪ್ರಶಂಸಿಸಿದರು. ಗಾಂಧೀಯವರು ಜಿನ್ನಾರವರ ಭೇಟಿಗೆ ಪತ್ರ ಬರೆದಿರುವರು. ಜಿನ್ನಾರವರು ಒಪ್ಪಿದ್ದಾರೆ. ಬೊಂಬಾಯಿಯಲ್ಲಿ ಇವರ ಭೇಟಿಯು ಆಗಸ್ಟ್ ಎರಡನೇ ವಾರದಲ್ಲಿ ಆಗಲಿದೆ. ಈ ಭೇಟಿಯ ಫಲಿತಾಂಶವೇನಾಗುವದೋ ನೋಡಬೇಕಿದೆ. ಈ ಮಧ್ಯೆ ಅಮೇರಿಕಾದ ಪ್ರೆಸಿಡೆಂಟ್ ರೂಸ್‌ವೆಲ್ಟರು ಹಿಂದೂದೇಶದ ಸಮಸ್ಯೆಯ ವಿಚಾರ ಚರ್ಚೆಲ್ಲರೊಡನೆ ಮಾತಾಡುವದೆಂಬ ವಾರ್ತೆಯೊಂದು ಬಂದಿದೆ.

ಎಂಪೈರ್ ಆಫ್ ಇಂಡಿಯಾ
ಲೈಫ್ ಅಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್.
34) ಸ್ಥಾಪನೆ:—೧೮೯೭.

ಳನೇ ವಾರ್ಷಿಕವ	ಒಟ್ಟು ಆದಾಯ	೯೭,೩೭,೦೦೦ ರೂ. ಮೀರಿದೆ
ರದಿಯಲ್ಲಿನ ಕೆಲವು	ಚಾಲ್ತಿಯಿರುವ ಪಾಲಿಸಿಗಳು	೬೯,೪೯,೮೮,೦೦೦ ,, ,,
ಸ್ಪಷ್ಟ ಸಂಗತಿಗಳು.	ಆಸ್ತಿ	೬,೩೦,೪೬,೦೦೦ ,, ,,

ಕಂಪೆನಿಯ ಆದಿಯಲ್ಲಿ ಕೊಟ್ಟ ಕ್ಲೈಮುಗಳು ೮,೩೮,೦೦,೦೦೦ ,, ,,

ಅಂಗ ಕಛೇರಿ:	ಏಜೆನ್ಸಿ	ಪ್ರಧಾನ ಕಛೇರಿ:
ಡಿಸ್ಟ್ರಿಕ್ಟ್ ಬೋರ್ಡ್ ಬಿಲ್ಡಿಂಗ್,	ಅರ್ಜಿಗಳನ್ನು	ಎಂಪೈರ್ ಆಫ್ ಇಂಡಿಯಾ
ಕೆಂಪೇಗೌಡ ರಸ್ತೆ, ಬೆಂಗಳೂರು.	ಸ್ವಾಗತಿಸಿದೆ.	ಲೈಫ್ ಬಿಲ್ಡಿಂಗ್ ಬೊಂಬಾಯಿ

"ಟ್ರೂ ಪಿಕ್ ಆಫ್"
ಕಂಪೆನಿಯಲ್ಲಿ ನಿಮ್ಮ ಮೂಡುವದೇ
ಯೋಗ್ಯವೆಂದು ನಿಮ್ಮ 1944 ರ ತೀರ್ಮಾನವಾಗಲಿ.
1943ರಲ್ಲಿ ಮಾಡಿದ ವಿಮಾ ಮೌಲ್ಯ ರೂ. 91,99,125.
ಹಿಂದೂದೇಶದ ಹಿರಿದಾದ ರಾಷ್ಟ್ರೀಯ ಕಂಪೆನಿ.
ಮುಖ್ಯ ಖಜೇರಿ: ಹೊಸ ದಿಲ್ಲಿ] [ಹೆಚ್ಚಿನ ಮಾಹಿತಿಗೆ ಈ ಪತ್ತೆಗೆ ಬರೆಯಿರಿ:—
ಯಂ. ಯು. ಅಚ್ಚಣ್ಣ, ಮಡಿಕೇರಿ. } ಅಥವಾ { ಯಂ. ರಂಗನಾಥಶೆಟ್ಟಿ ಬ್ರಾಂಚ್ ಮೇನೇಜರ್, ಮಂಗಳೂರು.
29)

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್ ಲಿ., ಮಡಿಕೇರಿ
ಕೋ-ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ. (1921ರಲ್ಲಿ ಸ್ಥಾಪಿತವಾಗಿದೆ.)
ವಸೂಲಾದ ಶೇರ್ ನೊಬಲಗು 95,060, ಜಮಾಬಂದ ಶೇವಣಾತಿ 2,24,755, ವಸೂಲಾದ ಕ್ಷೇಮನಿಧಿ 2,16,209, ಸೇವಿಂಗ್ಸ್ ಬ್ಯಾಂಕ್ ಡಿಪಾಜಿಟ್ಟು 2,02,925.
ಈ ಬ್ಯಾಂಕಿನಿಂದ ಸಹಕಾರ ಸಂಘಗಳಿಗೇನೇ ಹೆಚ್ಚಾಗಿ ಸಾಲ ಕೊಡುವದಲ್ಲದೆ ಡಿಪಾಜಿಟ್ಟುದಾರರಿಗೆ ಅವರ ಡಿಪಾಜಿಟ್ಟು ಆಧಾರದ ಮೇಲೆ 90% ಕೊಡಲಾಗುತ್ತೆ. ನಿರಖು ಶೇವಣಾತಿಗಳಿಗೆ 1 ವರ್ಷದಿಂದ 3 ವರ್ಷಗಳ ವರೆಗೆ ಶೇ ಕಡ 2. 3 ವರ್ಷಗಳಿಂದ 5 ವರ್ಷಗಳ ವರೆಗೆ 2½. 5 ವರ್ಷಗಳಿಂದ 10 ವರ್ಷಗಳ ವರೆಗೆ 3½. 10 ಮತ್ತು ಅದಕ್ಕಿಂತ ಮೇಲ್ಪಟ್ಟವುಗಳಿಗೆ 4½. ಸೇವಿಂಗ್ಸ್ ಬ್ಯಾಂಕ್ (on daily balance) ಡಿಪಾಜಿಟ್ಟುಗಳಿಗೆ ಶೇ 0-8-0.
ವರ್ಷಕ್ಕೊಮ್ಮೆ ರಿಜಿಸ್ಟ್ರಾರರವರು ಲೆಕ್ಕ ಪರಿಶೋಧನೆ ಮಾಡುತ್ತಾರೆ.

Edited, Printed and Published by P. I. Belliappa at 'Kodagu' Press, Mercara, for 'Kodagu' Ltd.